



|| Jai Sri Gurudev ||

Sri Adichunchanagiri Shikshana Trust (R.)

# SJC INSTITUTE OF TECHNOLOGY

(An Autonomous Institution under VTU from 2024-25)

AICTE Approved, Accredited by NAAC with A+ Grade & NBA (CSE, ISE, ECE, ME & CV), Gold rated by QS I-Gauge

www.sjcit.ac.in

Estd. 1986

Chikkaballapura - 562 101, Karnataka

## INVITATION

# ಪದವಿ ಪ್ರದಾನ ಸಮಾರಂಭ-೨೦೨೬



# Graduation Day-2026

## (Batch: 2022-26)

**Date : June 26, 2026 | Time : 10:00 a.m. | Venue : BGS Auditorium, SJCIT Campus**

### *Divine Blessings*

*His Holiness Jagadguru Padmabhushan*

***Sri Sri Sri Dr. Balagangadharanatha Mahaswamiji***

*Founder President, Sri Adichunchanagiri Shikshana Trust(R.)*

### *Divine Presence & Ashirvachan*

*His Holiness Jagadguru*

***Sri Sri Sri Dr. Nirmalanandanatha Mahaswamiji***

*President, Sri Adichunchanagiri Shikshana Trust(R.)*

### *Presence*

***Poojya Sri Sri Mangalanatha Swamiji***

*Secretary, Sri Adichunchanagiri Shakha Math, Chickballapur*

### *Chief Guest*

***Sri. Prabhu G*** *I.A.S*

*Deputy Commissioner and District Magistrate*

*Chikkaballapura District*

### *Guests of Honor*

***Mr. Sairam Santharam***

*CISO & CAiO - Avancer Corporation*

***Dr. N Shivarama Reddy***

*CAO, BGSGI, Chikkaballapura Division*

***Sri. Rangaswamy G R***

*Administrative Officer, SJCIT*

***Dr. G T Raju***

*Principal, SJCIT*

*All are Cordially Invited*

**By: Management, Principal, AO, Deans, HODs, Faculty, Staff and Students**

# GRADUATIONDAY - 2026 - GLIMPSES






(Batch: 2022-26)
JUNE 26, 2026










SJC INSTITUTE OF TECHNOLOGY
Graduation Day-2026
(Batch: 2022-26)
Hearty Welcome








SJC INSTITUTE OF TECHNOLOGY


SJC INSTITUTE OF TECHNOLOGY
Chikkaballapura
ಪದವಿ ಪ್ರದಾನ ಸಮಾರಂಭ-೨೦೨೬
Graduation Day-2026
(Batch: 2022-26)
JUNE 26, 2026

ಕನ್ನಡಪ್ರಭ

ಸಂಕಲ್ಪ ಮಾಡಿ | ಗ್ರಾಜ್ಯುಯೇಷನ್ ಡೇ-2026 ಸಮಾರಂಭದಲ್ಲಿ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

# ಜೀವನದಲ್ಲಿ ಪರೋಪಕಾರ ಗುಣ ಬೆಳೆಸಿಕೊಳ್ಳಿ: ಆದಿಚುಂಚನಗಿರಿ ಶ್ರೀ

• **ಕನ್ನಡಪ್ರಭ ವಾರ್ತೆ** ಚಿಕ್ಕಬಳ್ಳಾಪುರ

ಜ್ಞಾನಕ್ಕೆ ಮಿಗಿಲಾದ ವಸ್ತು ಬೇರೊಂದಿಲ್ಲ. ನಿರಂತರ ಅಧ್ಯಯನ ಮತ್ತು ಉತ್ತಮ ಚಿಂತನೆಯಿದ್ದರೆ ಮನಸ್ಸು ಲವಲವಿಕೆಯಿಂದ ಇರಲು ಸಾಧ್ಯ. ಮನುಷ್ಯನಾಗಿ ಹುಟ್ಟಿದ ಮೇಲೆ ಸಮಾಜಕ್ಕೆ ಒಳಿತಾಗುವ ಕೆಲಸವನ್ನು ಮಾಡಬೇಕು. ಪರೋಪಕಾರ ಗುಣವನ್ನು ಜೀವನದಲ್ಲಿ ಅಳವಡಿಸಿಕೊಂಡು ಸರ್ವಜನರ ಪ್ರೀತಿಗೆ ಪಾತ್ರವಾದಾಗ ಮಾತ್ರ ಬದುಕಿಗೆ ಸಾರ್ಥಕತೆ ಬರುತ್ತದೆ ಎಂದು ಆದಿ ಚುಂಚನಗಿರಿ ಪೀಠಾಧ್ಯಕ್ಷ ಡಾ.ನಿರ್ಮಲಾನಂದ ನಾಥ ಸ್ವಾಮೀಜಿ ತಿಳಿಸಿದರು.

ನಗರ ಹೊರವಲಯದ ಎಸ್ ಜೆಸಿಐಟಿ ಕಾಲೇಜು ಆವರಣದಲ್ಲಿನ ಬಿಜಿಎಸ್ ಸಭಾಂಗಣದಲ್ಲಿ ಶುಕ್ರವಾರ ಎಸ್‌ಜೆಸಿ ತಾಂತ್ರಿಕ ಮಹಾ ವಿದ್ಯಾಲಯ ಏರ್ಪಡಿಸಿದ್ದ ಗ್ರಾಜ್ಯುಯೇಷನ್ ಡೇ-2026 ಸಮಾರಂಭದಲ್ಲಿ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿ ಮಾತನಾಡಿ, ಪಾಲಕರು ಮಕ್ಕಳ ಉಜ್ವಲ ಭವಿಷ್ಯ ರೂಪಿಸುವ ಕನಸಿನಲ್ಲಿ ಕಷ್ಟಪಟ್ಟು ಶಿಕ್ಷಣ ಕೊಡಿಸುತ್ತಾರೆ. ಯಾರು ಇದನ್ನು ಅರಿತು ಜವಾಬ್ದಾರಿಯಿಂದ ಮುನ್ನಡೆಯುತ್ತಾರೋ ಅವರು ಉತ್ತಮ ಭವಿಷ್ಯ ಕಟ್ಟಿಕೊಳ್ಳುತ್ತಾರೆ. ವಿದ್ಯಾರ್ಥಿಗಳಾದವರು ಸತತ ಪ್ರಯತ್ನಶೀಲರಾಗಿರಬೇಕಾಗುತ್ತದೆ. ಇದಾದರೆ ಮಾತ್ರ ಏನಾದರೂ ಸಾಧಿಸಲು ಸಾಧ್ಯ. ಇದಿಲ್ಲದೆ ಕೇವಲ ಅಧ್ಯಾಪಕರು ಮಾಡುವ ಪಾಠ ಪ್ರವಚನಗಳಿಂದ, ಪೋಷಕರು ತೋರುವ ಪ್ರೀತಿಯಿಂದ ಮಾತ್ರವೇ ಏಳಿಗೆ ಸಾಧ್ಯ ಎಂಬ ಭಾವನೆ ಉಳ್ಳವರು ಏನನ್ನೂ ಸಾಧಿಸುವುದಿಲ್ಲ.



ಗ್ರಾಜ್ಯುಯೇಷನ್ ಡೇ ಕಾರ್ಯಕ್ರಮದಲ್ಲಿ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಮತ್ತು ಪದವಿ ಪಡೆದ ವಿದ್ಯಾರ್ಥಿಗಳು.

ಸಂಕಲ್ಪಕ್ಕೆ ಪೂರಕವಾಗಿ ಸಾಧನೆ ಮಾಡಬೇಕು. ವಿದ್ಯಾರ್ಥಿಗಳು ಯಾವುದೇ ಉನ್ನತ ಶಿಕ್ಷಣ ಪಡೆದರೂ ವೈಯಕ್ತಿಕ ಗುಣಗಳು ಸಹಾನುಭೂತಿ, ಪೋಷಕರಿಗೆ ಗೌರವ, ಸಂವಹನದ ಮೌಲ್ಯಗಳನ್ನು ಮರೆಯಬಾರದು. ಇಂದಿನ ತಾಂತ್ರಿಕ ಬೆಳವಣಿಗೆಗೆ ನಿರಂತರ ಕಲಿಕೆ ಬಹು ಮುಖ್ಯ, ನಾಲ್ಕು ವರ್ಷದ ಪದವಿ ಕೇವಲ ಉದ್ಯೋಗಕ್ಕೆ ಸೀಮಿತವಲ್ಲ, ಕಲಿಕೆಯ ಆರಂಭ. ಹೆಚ್ಚು ಹೆಚ್ಚು ಕೌಶಲ್ಯ ವೃದ್ಧಿಸಿಕೊಳ್ಳಿ, ಪೋಷಕರು, ಸಮಾಜವನ್ನು ಗೌರವಿಸಿ ಮುಂದೆ ನಡೆದಾಗ ಸಮಾಜ ನಿಮ್ಮನ್ನು ಗೌರವಿಸುತ್ತದೆ ಎಂದು ಹೇಳಿದರು.

ಜಿಲ್ಲಾಧಿಕಾರಿ ಜಿ.ಪ್ರಭು ಮಾತನಾಡಿ, ದೇಶದ ಆರ್ಥಿಕತೆಯ ಬೆಳವಣಿಗೆಗೆ ಯುವಜನತೆಯ ಪಾತ್ರ ಬಹುಮುಖ್ಯ ಇದು ಉತ್ಪಾದನೆ, ಉದ್ಯಮಶೀಲತೆ, ಕೈಗಾರಿಕೀಕರಣ, ಹಣಕಾಸು, ಸಂಶೋಧನಾ ಅಭಿವೃದ್ಧಿ ಕ್ಷೇತ್ರಗಳ ಮೇಲೆ ಆರ್ಥಿಕತೆ ಹೇಗೆ ಅವಲಂಬಿಸಿದೆ. ನಾವಿನ್ಯತೆ ಮತ್ತು ಸಂಶೋಧನೆಯಿಂದ ವಿದ್ಯಾರ್ಥಿಗಳಿಗೆ ಹೆಚ್ಚು ಅವಕಾಶ ಗಳು ಉದ್ಭವವಾಗುತ್ತವೆ. ದೇಶದ ಸಮಗ್ರ ಅಭಿವೃದ್ಧಿಯಲ್ಲಿ ಮಾನವ ಸಂಪನ್ಮೂಲ ಜ್ಞಾನದ ಪಾತ್ರ ಬಹುಮುಖ್ಯ ಎಂದರು.

ಕಾರ್ಯಕ್ರಮದಲ್ಲಿ 2022-2026ನೇ ಸಾಲಿನ ಎಂಜಿನಿಯರಿಂಗ್ ಪದವಿ ಪೂರೈಸಿದ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿದರು. ಆದಿಚುಂಚನಗಿರಿ ಸಂವಿತ್ ಶಾಲೆ ಗ್ರಾಮೀಣ ಭಾಗದ ಪ್ರತಿಭಾವಂತ ಉಚಿತ ವಸತಿ ಶಾಲೆಯ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ ಸ್ವಾಮೀಜಿಯವರ ಆಶೀರ್ವಾದ ಪಡೆದರು. ಸಮಾರಂಭದಲ್ಲಿ ಮೈಸೂರು ಅವಾನ್ಸರ್‌ಕಾರ್ಪೋರೇಷನ್ ಮೆಡಿಕಲ್ ಕಾಲೇಜಿನ ಡೀನ್ ಡಾ. ದಾಕ್ಷಾಯಣಿ ಎಸ್ ಜೆಸಿಐಟಿ ಪ್ರಾಂಶುಪಾಲ ಡಾ.ಜಿ.ಟಿ ರಾಜು, ಆಡಳಿತಾಧಿಕಾರಿ ಜಿ.ಆರ್. ರಂಗಸ್ವಾಮಿ, ಅಕಾಡೆಮಿಕ್ಸ್ ಡೀನ್ ಡಾ.ಬಿ.ಹೆಚ್. ಮಂಜುನಾಥ್ ಕುಮಾರ್, ಕಾಲೇಜಿನ ವಿವಿಧ ವಿಭಾಗಗಳ ಮುಖ್ಯಸ್ಥರು, ಕಾಲೇಜಿನ ಭೋಧಕ, ಬೋಧಕೇತರ ಸಿಬ್ಬಂದಿ ಇದ್ದರು.

KOLAR Edition
Jun 29, 2026 Page No. 03
Powered by: erelego.com

# ಪ್ರತಿನಿತ್ಯ ಕಲಿಕೆ ಇದ್ದರಷ್ಟೇ ಅಸ್ತಿತ್ವ ಉಳಿಸಿಕೊಳ್ಳಲು ಸಾಧ್ಯ

## ಎಸ್‌ಜೆಸಿಐಟಿ ಕಾಲೇಜಿನಲ್ಲಿ ನಡೆದ ಪದವಿ ಪ್ರದಾನ ಸಮಾರಂಭದಲ್ಲಿ ಆಶೀರ್ವಚನ ನೀಡಿದ ಚುಂಚಶ್ರೀ

■ **ವಿಕ ಸುದ್ದಿಲೋಕ** ಚಿಕ್ಕಬಳ್ಳಾಪುರ

ಈಗಿನ ಯುಗದಲ್ಲಿ ಪ್ರತಿನಿತ್ಯ ಕಲಿಕೆ ಇದ್ದರಷ್ಟೇ ಅಸ್ತಿತ್ವ ಉಳಿಸಿಕೊಳ್ಳಲು ಸಾಧ್ಯ. ಹೊಸ ಕೌಶಲಗಳನ್ನು ಬೆಳೆಸಿಕೊಂಡು ಮುನ್ನಡೆಯಬೇಕು. ನೀವು ಏನಾಗಿದ್ದೀರಿ ಎಂಬುದು ಮುಖ್ಯವಲ್ಲ, ನೀವು ಸಮಾಜಕ್ಕೆ ಏನು ಕೊಡುಗೆ ಕೊಟ್ಟಿದ್ದೀರಿ ಎಂಬುದು ಮುಖ್ಯ ಎಂದು ಆದಿಚುಂಚನಗಿರಿ ಪೀಠಾಧ್ಯಕ್ಷ ಡಾ. ನಿರ್ಮಲಾನಂದನಾಥ ಸ್ವಾಮೀಜಿ ತಿಳಿಸಿದರು.

ನಗರ ಹೊರವಲಯದ ಎಸ್‌ಜೆಸಿಐಟಿ ಕಾಲೇಜಿನ ಬಿಜಿಎಸ್ ಆಡಿಟೋರಿಯಂನಲ್ಲಿ ನಡೆದ ಪದವಿ ಪ್ರದಾನ ಸಮಾರಂಭ ಉದ್ಘಾಟಿಸಿ ಆಶೀರ್ವಚನ ನೀಡಿದ ಅವರು, ವಿದ್ಯಾರ್ಥಿಗಳು ತಮ್ಮ ಮುಂದಿನ ಭವಿಷ್ಯದ ರೂಪರೇಷೆಗಳನ್ನು ರಚಿಸಿಕೊಳ್ಳುವುದರ ಜತೆಗೆ ಸಮಾಜದ ಏಳಿಗೆಗೂ ಶ್ರಮಿಸಬೇಕು. ನಿಮ್ಮ ಬೆಳವಣಿಗೆಯಲ್ಲಿ ಪೋಷಕರು ನಿರ್ವಹಿಸಿದ ಜವಾಬ್ದಾರಿಯನ್ನು ಮರೆಯದೇ ಎಲ್ಲ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು ಎಂದರು.

ವಿದ್ಯಾರ್ಥಿಗಳು ಶಿಸ್ತು ಮತ್ತು ಶ್ರದ್ಧೆಯನ್ನು ರೂಢಿಸಿಕೊಳ್ಳಬೇಕು. ಅಡೆತಡೆಗಳನ್ನು ಸಕಾರಾತ್ಮಕವಾಗಿ ಸ್ವೀಕರಿಸಿ ನಡೆದು ಬಂದ ದಾರಿಯನ್ನು ಮರೆಯದೆ ಮುಂದಿನ ಭವಿಷ್ಯವನ್ನು ರೂಪಿಸಿಕೊಳ್ಳಬೇಕು. ನೀವು ಎಷ್ಟೇ ಸ್ಥಾನಮಾನಕ್ಕೆ ಹೋದರೂ ಸಮಾಜಕ್ಕೆ ಗೌರವ ಕೊಡುವುದನ್ನು ರೂಢಿಸಿಕೊಳ್ಳಬೇಕು. ನೀವು ಮಾಡುವ ಪ್ರತಿ ಕೆಲಸದಲ್ಲಿ ವಿನಯತೆ ಇದ್ದರೆ ಸಮಾಜವೇ ನಿಮಗೆ ಗೌರವವನ್ನು ನೀಡುತ್ತದೆ ಎಂದು ಹೇಳಿದರು.



ಚಿಕ್ಕಬಳ್ಳಾಪುರದ ಎಸ್‌ಜೆಸಿಐಟಿ ಕಾಲೇಜಿನ ಬಿಜಿಎಸ್ ಆಡಿಟೋರಿಯಂನಲ್ಲಿ ನಡೆದ ಸಮಾರಂಭದಲ್ಲಿ, ಆದಿಚುಂಚನಗಿರಿ ಪೀಠಾಧ್ಯಕ್ಷ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಅತ್ಯುತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿದರು.

> ಶಿಕ್ಷಣವೊಂದರಿಂದಲೇ ನೀವು ಎಲ್ಲವನ್ನೂ ಮಾಡಲು ಸಾಧ್ಯವಿಲ್ಲ, ನೀವು ಮಾಡುವ ಸಾಧನೆ ಜತೆ ನಿಮ್ಮಲ್ಲಿರುವ ವಿನಯತೆ, ಮಾನವೀಯತೆ ನಿಮ್ಮನ್ನು ಎತ್ತರದ ಸ್ಥಾನದಲ್ಲಿರಿಸಲಿದೆ. ಸಚಿನ್ ಅವರ ದಾಖಲೆಗಳನ್ನು ಯಾರೂ ಬೇಕಾದರೂ ಮುರಿಯಬಹುದು. ಆದರೆ ಅವರಲ್ಲಿನ್ನ ವಿನಯತೆ ಅವರನ್ನು ಬೇರೆಯದ್ದೇ ಸ್ಥಾನದಲ್ಲಿಟ್ಟಿದೆ ಎಂದು ಸುನಿಲ್ ಗವಾಸ್ಕರ್ ಅವರು ಸಂದರ್ಶನವೊಂದರಲ್ಲಿ ಹೇಳಿದ್ದರು. ಅದೇ ರೀತಿ ನೀವು ಕೂಡಾ ಸಾಧನೆ ಜತೆ ವಿನಯತೆ, ಮಾನವೀಯತೆಯನ್ನು ರೂಢಿಸಿಕೊಳ್ಳಬೇಕು.
>
> **-ಡಾ. ನಿರ್ಮಲಾನಂದನಾಥ ಸ್ವಾಮೀಜಿ** | ಆದಿಚುಂಚನಗಿರಿ ಪೀಠಾಧ್ಯಕ್ಷ

ಜಿಲ್ಲಾಧಿಕಾರಿ ಜಿ.ಪ್ರಭು ಮಾತನಾಡಿ, ಜಗತ್ತಿನಲ್ಲಿ ಅವಕಾಶಗಳಿಗೆ ಕೊರತೆಯಿಲ್ಲ, ಆದರೆ ಅವುಗಳನ್ನು ದಕ್ಕಿಸಿಕೊಳ್ಳಲು ವಿದ್ಯಾರ್ಥಿಗಳ ಹೆಚ್ಚಿನ್ನು ಸಂಶೋಧನೆಯಲ್ಲಿ ತೊಡಗಿಕೊಳ್ಳಬೇಕು. ಇಡೀ ಜಗತ್ತಿನಲ್ಲಿ ನಡೆಯುವ ಶೇ.೨೦ಕ್ಕಿಂತ ಹೆಚ್ಚು ಸಂಶೋಧನೆಗಳು ಅಮೆರಿಕದಲ್ಲಿ ನಡೆಯುತ್ತವೆ. ನಮ್ಮ ದೇಶದಲ್ಲೂ ಸಂಶೋಧನೆಗೆ ಪೂರಕವಾದ ವ್ಯವಸ್ಥೆ ಇದೆ. ಎಲ್ಲರೂ ಇದರಲ್ಲಿ ತೊಡಗಿಕೊಳ್ಳಬೇಕು ಎಂದು ಹೇಳಿದರು.

ಹಿಂದೆಲ್ಲ ದೇಶದ ಸಂಪತ್ತನ್ನು ಭೌತಿಕ ಸಂಪನ್ಮೂಲಗಳಿಂದ ಅಳೆಯುತ್ತಿದ್ದರು. ಆದರೆ ಈಗ ಜ್ಞಾನವೇ ಅಳತೆಗೋಲಾಗಿದೆ. ನಮ್ಮ ದೇಶಕ್ಕೆ ಇಡೀ ಜಗತ್ತಿಗೆ ನಾಯಕತ್ವ ಕೊಡುವ ಸಾಮರ್ಥ್ಯವಿದೆ. ಮೊದಲ ಗುರಿಯನ್ನು ಇಟ್ಟುಕೊಂಡರೆ ಸಾಧನೆ ಮಾಡಲು ಸಾಧ್ಯ. ಹೀಗಾಗಿ ವಿದ್ಯಾರ್ಥಿಗಳು ಹೆಚ್ಚಿನ್ನು ಕೌಶಲಗಳನ್ನು ರೂಢಿಸಿಕೊಳ್ಳಲು ಮುಂದಾಗಬೇಕು ಎಂದರು.

ಸಿಸ್ಕೋ ಮತ್ತು ಸಿಇಒ ಅವಾನ್ಜರ್ ಕಾರ್ಪೊರೇಷನ್‌ನ ಸಾಯಿರಾಮ್ ಕಾಂತರಾಜ್ ಮಾತನಾಡಿ, ಎಐ ಬಂದ ನಂತರ ಉದ್ಯೋಗ ಅವಕಾಶಗಳು ಸಿಗುವುದಿಲ್ಲ ಎಂಬುದು ಸುಳ್ಳು. ನೀವು ಎಐ ಕಲಿಯದಿದ್ದರೆ ಅವಕಾಶಗಳು ಸಿಗದೇ ಹೋಗಬಹುದು. ಆದರೆ ಬದಲಾದ ತಂತ್ರಜ್ಞಾನಗಳನ್ನು ಕಲಿತುಕೊಂಡರೆ ಅವಕಾಶಗಳಿಗೇನೂ ಕೊರತೆಯಿಲ್ಲ. ವಿದ್ಯಾರ್ಥಿಗಳೇ ಸೂಪರ್ ಸ್ಟಾರ್‌ಗಳು, ನೀವು ಜೀವನದಲ್ಲಿ ಏನು ಬೇಕಾದರೂ ಮಾಡಬಹುದು ಎಂದರು.

ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್‌ನ ಆಡಳಿತಾಧಿಕಾರಿ ಡಾ.ಎನ್.ಶಿವರಾಮರೆಡ್ಡಿ ಪದವಿ ಪ್ರಮಾಣ ಬೋಧಿಸಿದರು. ಸಮಾರಂಭದಲ್ಲಿ ಡಾಕ್ಟರೇಟ್ ಪಡೆದವರು, ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಪದವಿ ಪಡೆದ ಎಲ್ಲ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ನೀಡಲಾಯಿತು. ಮೈಸೂರು ಮೆಡಿಕಲ್ ಕಾಲೇಜಿನ ಡೀನ್ ಹಾಗೂ ನಿರ್ದೇಶಕಿ ಡಾ.ದಾಕ್ಷಾಯಿಣಿ, ಎಸ್‌ಜೆಸಿಐಟಿ ಕಾಲೇಜಿನ ಪ್ರಿನ್ಸಿಪಾಲ್ ಡಾ.ಜಿ.ಟಿ.ರಾಜು ಮಾತನಾಡಿದರು. ಎಸ್‌ಜೆಸಿಐಟಿ ಆಡಳಿತಾಧಿಕಾರಿ ರಂಗಸ್ವಾಮಿ, ಎಲ್ಲ ವಿಭಾಗಗಳ ಮುಖ್ಯಸ್ಥರು, ಪ್ರಾಧ್ಯಾಪಕರು, ವಿದ್ಯಾರ್ಥಿಗಳು, ಪೋಷಕರು ಇದ್ದರು.

ಎಸ್‌ಜೆಸಿ ತಾಂತ್ರಿಕ ವಿದ್ಯಾಲಯದಲ್ಲಿ ಪದವಿ ಪ್ರದಾನ ಸಮಾರಂಭ

# ಪೋಷಕರು ನಿರ್ವಹಿಸಿದ ಜವಾಬ್ದಾರಿ ಮರೆಯದಿರಿ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪಡೆದರೂ ವೈಯಕ್ತಿಕ ಗುಣಗಳು, ಸಹಾನುಭೂತಿ, ಪೋಷಕರಿಗೆ ಗೌರವ, ಸಂವಹನದ ಮೌಲ್ಯಗಳನ್ನು ಮರೆಯಬಾರದು ಎಂದು ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ತಿಳಿಸಿದರು.

ನಗರದ ಎಸ್‌ಜೆಸಿ ತಾಂತ್ರಿಕ ವಿದ್ಯಾಲಯದಲ್ಲಿ ಶುಕ್ರವಾರ ನಡೆದ ಪದವಿ ಪ್ರದಾನ ಸಮಾರಂಭದ ಸಾನ್ನಿಧ್ಯವಹಿಸಿ ಮಾತನಾಡಿದರು.

ವಿದ್ಯಾರ್ಥಿಗಳು ಭವಿಷ್ಯದ ರೂಪುರೇಷೆಗಳ ಬಗ್ಗೆ ಅರಿವು ಹೊಂದಬೇಕು. ಭವಿಷ್ಯದ ರೂಪುರೇಷೆಗಳನ್ನು ರಚಿಸಿಕೊಂಡು ಸಮಾಜದ ಏಳಿಗೆಗೆ ಶ್ರಮಿಸಬೇಕು. ನಿಮ್ಮ ಬೆಳವಣಿಗೆಗಳ ನಡುವೆ ನಿಮ್ಮ ಬಗ್ಗೆ ಪೋಷಕರು ನಿರ್ವಹಿಸಿದ ಜವಾಬ್ದಾರಿಯನ್ನು ಮರೆಯಬಾರದು. ಜೀವನದಲ್ಲಿ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ಇಂದಿನ ತಾಂತ್ರಿಕ ಬೆಳವಣಿಗೆಗೆ ನಿರಂತರ ಕಲಿಕೆ ಬಹು ಮುಖ್ಯ. ನಾಲ್ಕು ವರ್ಷದ ಪದವಿ ಕೇವಲ ಉದ್ಯೋಗಕ್ಕೆ ಸೀಮಿತವಲ್ಲ. ಹೆಚ್ಚು ಕೌಶಲ ವೃದ್ಧಿಸಿಕೊಳ್ಳಬೇಕು. ಪೋಷಕರು, ಸಮಾಜವನ್ನು ಗೌರವಿಸಬೇಕು. ಆಗ ಸಮಾಜ ನಿಮ್ಮನ್ನು ಗೌರವಿಸುತ್ತದೆ ಎಂದು ಹೇಳಿದರು.

ಜಿಲ್ಲಾಧಿಕಾರಿ ಜಿ. ಪ್ರಭು ಮಾತನಾಡಿ, ದೇಶದ ಆರ್ಥಿಕತೆ ಬೆಳವಣಿಗೆಗೆ ಯುವಜನತೆಯ ಪಾತ್ರ ಬಹುಮುಖ್ಯ. ನಾವಿನ್ಯ ಮತ್ತು ಸಂಶೋಧನೆಯಿಂದ ವಿದ್ಯಾರ್ಥಿಗಳಿಗೆ ಹೆಚ್ಚು ಅವಕಾಶಗಳು ದೊರೆಯುತ್ತವೆ. ದೇಶದ ಸಮಗ್ರ ಅಭಿವೃದ್ಧಿಯಲ್ಲಿ ಮಾನವ ಸಂಪನ್ಮೂಲದ ಪಾತ್ರ ಬಹುಮುಖ್ಯವಾದುದು ಎಂದರು.

ಉತ್ಪಾದನೆ, ಉದ್ಯಮಶೀಲತೆ, ಕೈಗಾರಿಕೆ, ಹಣಕಾಸು, ಸಂಶೋಧನಾ ಅಭಿವೃದ್ಧಿ ಕ್ಷೇತ್ರಗಳ ಮೇಲೆ ಆರ್ಥಿಕತೆ ಹೇಗೆ ಅವಲಂಬಿಸಿದೆ ಎನ್ನುವ ಬಗ್ಗೆ ವಿವರಿಸಿದರು.

ಮೈಸೂರಿನ ವೈದ್ಯಕೀಯ ಶಿಕ್ಷಣ ಕಾಲೇಜಿನ ಡೀನ್ ಡಾ. ದಾಕ್ಷಾಯಣಿ ಮಾತನಾಡಿ, ಪದವಿ ಪಡೆಯಲು ಕಾರಣರಾದ ಪ್ರಾಧ್ಯಾಪಕರನ್ನು ಮತ್ತು ಪೋಷಕರನ್ನು ಮರೆಯಬಾರದು ಎಂದರು.



ಚಿಕ್ಕಬಳ್ಳಾಪುರದ ಎಸ್‌ಜೆಸಿ ತಾಂತ್ರಿಕ ವಿದ್ಯಾಲಯದಲ್ಲಿ ನಡೆದ ಪದವಿ ಪ್ರದಾನ ಸಮಾರಂಭದಲ್ಲಿ ಪ್ರತಿಜ್ಞಾ ವಿಧಿ ಸ್ವೀಕರಿಸಿದ ವಿದ್ಯಾರ್ಥಿಗಳು

ಪ್ರಾಂಶುಪಾಲ ಜಿ.ಟಿ ರಾಜು, ವಿದ್ಯಾರ್ಥಿಗಳು ವೃತ್ತಿ ಜೀವನದಲ್ಲಿ ಯಶಸ್ವಿ ಆಗುವುದರ ಜೊತೆಗೆ ಮಾನವೀಯ ಮೌಲ್ಯಗಳುಳ್ಳ ವ್ಯಕ್ತಿಗಳಾಗಬೇಕು. ಕಲಿಕೆಯ ಜೊತೆಗೆ ಸೇವಾ ಮನೋಭಾವವನ್ನು ರೂಢಿಸಿಕೊಂಡು ಸಂಸ್ಥೆಯ ಮೌಲ್ಯಗಳನ್ನು ಉಳಿಸಬೇಕು ಎಂದರು.

ಆದಿಚುಂಚನಗಿರಿ ಶಿಕ್ಷಣ ಸಂಸ್ಥೆ ಮುಖ್ಯ ಆಡಳಿತಾಧಿಕಾರಿ ಎನ್. ಶಿವರಾಮರೆಡ್ಡಿ ಪ್ರತಿಜ್ಞಾವಿಧಿ ಬೋಧಿಸಿದರು. ಸಾಯಿರಾಂ ಸಂತಾರಾಮ್ ಮಾತನಾಡಿದರು. ಅಂತಿಮ ವರ್ಷದ ಬಿ.ಇ, ಎಂ.ಟೆಕ್, ಎಂ.ಬಿ.ಎ, ಬಿ.ಎಸ್ಸಿ ಹಾನರ್ಸ್ ಮತ್ತು ಪಿಎಚ್.ಡಿ ವಿದ್ಯಾರ್ಥಿಗಳಿಗೆ, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರಗಳನ್ನು ನೀಡಲಾಯಿತು.

# Students must not forget personal values, compassion: Seer

CHIKKABALLAPUR, DHNS

Students should not forget personal values, compassion, respect for parents, and the importance of communication even after obtaining higher education, said Adichunchanagiri Mutt Pontiff Nirmalanandanatha Swamiji.

The seer was speaking at the graduation ceremony held at SJC Institute of Technology here on Friday.

The Swamiji said students should have a clear vision for their future and work towards the progress of society. They should never forget the responsibilities and sacrifices their parents made for their growth and should imbibe strong moral values in life. The pontiff emphasised that continuous learning is essential in today's rapidly advancing technological world. A four-year degree is not just a pathway to employment. Students should constantly upgrade their skills, respect their parents and society. If you respect society, the society will respect you, the seer said.



Students take oath in the graduation ceremony held at SJC College of Technology in Chikkaballapur. DH PHOTO

Deputy Commissioner G Prabhu said the role of youth is crucial in strengthening the country's economy. Innovation and research create greater opportunities for students, and human resources play a vital role in the nation's overall development.

He explained how the economy depends on sectors like manufacturing, entrepreneurship, industry, finance, and research and development.

Mysore's Medical College Dean Dakshayani that graduates should never forget the professors and parents who played a vital role in helping them earn their degree.

Principal G T Raju spoke Degree certificates were distributed to final-year BE, MTech, MBA, BSc (honours) students.